ಆಳ್ವಾಸ್ ಕಾಲೇಜು ಮೂಡುಬಿದಿರೆ

ಕನ್ನಡ ಸಂಸ್ಕೃತಿ ಅಧ್ಯಯನ ಕೇಂದ್ರ


**2017–18** ನೇ ಸಾಲಿನ ಕಾರ್ಯಕ್ರಮ ವರದಿ

ಆಳ್ವಾಸಿನ ಕನ್ನಡ ಸಂಸ್ಕೃತಿ ಅಧ್ಯಯನ ಕೇಂದ್ರವು ವಿದ್ಯಾರ್ಥಿಗಳಿಗೆ ಕನ್ನಡ ಸಾಹಿತ್ಯದ ಬಗೆಗಿನ ಸೊಗಡನ್ನು ಅದರ ಹಿರಿಮೆಯನ್ನು ಅದರ ಕುರಿತಾದ ಬಿಲವನ್ನು ಉತ್ತೇಜಿಸುವ ಕಾರ್ಯವನ್ನು ಮಾಡುತ್ತಿರುವಂತಹ ಒಂದು ಅರ್ಥ ಪೂರ್ಣ ಸಂಘ. ಪ್ರಸ್ತುತ 2017–18ನೇ ಸಾಲಿನಲ್ಲಿ ನಮ್ಮ ಸಂಘವು ನಲ್ವತ್ತೊಂಬತ್ತು ವಿದ್ಯಾರ್ಥಿಗಳನ್ನು ಒಳಗೊಂಡು ಹಲವಾರು ಕಾರ್ಯಕ್ರಮಗಳನ್ನು ಪಾಲ್ಗೊಂಡು ಅದರ ಒಂದು ಅಂಗವಾಗಿದ್ದ, ಕಾರ್ಯಕ್ರಮಗಳ ಆಯೋಜನೆಗೂ ಕಾರಣವಾಗಿದೆ. ವರ್ಷದ ಎರಡು ಸೆಮಿಸ್ಟರ್‌ಗಳಲ್ಲಿ ಒಟ್ಟು 22 ಕಾರ್ಯಕ್ರಮಗಳನ್ನು ಚಟುವಟಿಕೆಗಳನ್ನು ನಡೆಸಿರುತ್ತದೆ. ನಮ್ಮ ಕನ್ನಡ ಸಂಘದ ಮಹತ್ವದ ಕಾರ್ಯವೆಂದರೆ ಆಕಾಶವಾಣಿ ಮಂಗಳೂರಿನ ರೆಕಾರ್ಡಿಂಗ್‌ನಲ್ಲಿ ಭಾಗವಹಿಸಿದ್ದು. ಈ ಬಾರಿ ನಮ್ಮ ಕನ್ನಡ ಸಂಘದ ಹಲವಾರು ವಿಚಾರಗೋಷ್ಠಿಯನ್ನು ಆಯೋಜಿಸಿತ್ತು. **'ತೇಜಸ್ವಿ–ಕೃತಿ ಶೋಧ'**ವು ಆಯೋಜನೆಗೊಂಡು ಉತ್ತಮ ರೀತಿಯಲ್ಲಿ ಕಾರ್ಯಕ್ರಮವು ಮೂಡಿ ಬಂದಿತು. ವಿದ್ಯಾರ್ಥಿಗಳಲ್ಲಿ ಅಡಗಿಂತ ಹಲವಾರು ಪ್ರತಿಭೆಗಳನ್ನು ಹೊರ ತರುವ ಉದ್ದೇಶದಿಂದ ಆಶುಭಾಷಣ, ಪ್ರಬಂಧಮಂಡನೆ, ಕವಿತಾ ರಚನಾ ಕಾರ್ಯಗಾರ ಲೇಖನ ಬರವಣಿಗೆಗಾಗಿ ಕಾರ್ಯಗಾರವನ್ನು ಆಯೋಜಿಸಲಾಗಿತ್ತು. ಸಂಘದ ವಿದ್ಯಾರ್ಥಿಗಳು ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅದರ ಪ್ರಯೋಜನವನ್ನು ಪಡೆದಿದ್ದಾರೆ. ಸಂತೋಷ್ ಕುಮಾರ್ ಗುಲ್ವಾಡಿಯವರ ನೆನಪು, ತುಳು ಸಂಘದ ಕಾರ್ಯಕರ್ಮ, ಮ್ಯೂಸಿಕ್ ಫೋರಮ್‌ನ ದಾಸ ಸಾಹಿತ್ಯ ಕಾರ್ಯಕ್ರಮ, ಶಿವರಾಮ ಕಾರಂತ ವಿಚಾರಗೋಷ್ಠಿ, ಕವಿ ಎಂ.ಗೋಪಾಲಕೃಷ್ಣ ಅಡಿಗ ಸಾಹಿತ್ಯಾವಲೋಕನ, ತುಳು ಅಕಾಡೆಮಿಯ ಕಾರ್ಯಕ್ರಮದ ಒಂದು ಭಾಗವಾಗಿ ಸಂಘದ ವಿದ್ಯಾರ್ಥಿಗಳ ಪಾಲ್ಗೊಂಡಿದ್ದರು. ಹಲವಾರು ವೀಡಿಯೋ ಕ್ಲಿಪ್‌ಗಳನ್ನು ತೋರಿಸಿ ಅದರಲ್ಲಿ ಅಡಗಿಹ ನೈತಿಕ ಗುಣಗಳನ್ನು ವಿದ್ಯಾರ್ಥಿಗಳಲ್ಲಿ ತುಂಬಲಾಯಿತು. ಕನ್ನಡ ವಿಕಿಪೀಡಿಯಾದ ಬಗ್ಗೆ ಮಾಹಿತಿ, ಹಾಸ್ಯ–ಲಾಸ್ಯ ಕಾರ್ಯಕ್ರಮದ ಮೂಲಕ ನಗುವಿನ ಔತಣವನ್ನು ಉಣಬಡಿಸಲಾಯಿತು. ಹಲವಾರು ಪ್ರಬಂಧಮಂಡನೆಯಿಂದ ಸಾಹಿತ್ಯದ ಬಗೆಗಿನ ಮಾಹಿತಿಯು ವಿದ್ಯಾರ್ಥಿಗಳಿಗೆ ದೊರೆಯಿತು. ಪ್ರಸಕ್ತ 2017–18ನೇ ಸಾಲಿನ ಕಾರ್ಯಕ್ರಮಗಳು ಉತ್ತಮ ರೀತಿಯಲ್ಲಿ ಮೂಡಿಬಂದಿತು.

ಡಾ.ಕೃಷ್ಣರಾಜಕರಬ
ಸಂಚಾಲಕರು


ಆಳ್ವಾಸ್ ಕಾಲೇಜು, ಮೂಡುಬಿದಿರೆ
ಆಳ್ವಾಸ್ ಕನ್ನಡ ಸಂಸ್ಕೃತಿ ಅಧ್ಯಯನ ಕೇಂದ್ರ


ಆಳ್ವಾಸ್ ಕಾಲೇಜು, ಮೂಡುಬಿದಿರೆ
ಆಳ್ವಾಸ್ ಕನ್ನಡ ಸಂಸ್ಕೃತಿ ಅಧ್ಯಯನ ಕೇಂದ್ರ


ಪ್ರಬಂಧ ಮಂಡನೆ- ವಿದ್ಯಾರ್ಥಿಗಳಿಂದ
ಕನ್ನಡ ಸಂಘ
ಕಾಲೇಜು, ಮೂಡುಬಿದಿರೆ


ಕನ್ನಡ ವಿಕಿಪೀಡಿಯಾ -
ಒಂದು ಮಾಹಿತಿ

